ಕರ್ನಾಟಕ ವಿಧಾನ ಸಭೆ
ಸೋಮವಾರ 27ನೇ ಮಾರ್ಚ್ 1995
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್ ಅವರು)
ಪೀಠವನ್ನು ಅಲಂಕರಿಸಿದ್ದರು.

-★-

ಚುಕ್ಕೆ ಗುರ್ತಿನ ಪ್ರಶೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :- ಸಿಂಗಟಾಲೂರು ಗ್ರಾಮದ ಹತ್ತಿರ ಸೇತುವೆ ನಿರ್ಮಾಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ (60) (141)
ಶ್ರೀ ಡಿ.ಆರ್. ಪಾಟೀಲ್ (ಗದಗ)

ಮಾನ್ಯ : ಲೋಕೋಪಯೋಗಿ ಸಚಿವರು. ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನ ಸಿಂಗಟಾಲೂರ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಬ್ರಿಜ್ ಅಥವಾ ಬ್ರಿಜ್ ಕಮ್ ಬ್ಯಾರೇಜ್ ಕಟ್ಟುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ.

ಆ) ಇದ್ದರೆ 1995-96ನೇ ಹಣಕಾಸಿನ ವರ್ಷದಲ್ಲಿ ತೆಗೆದುಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೇ.

ಇ) ಹಾಗಿಲ್ಲದಿದ್ದಲ್ಲಿ ಈ ಕಾಮಗಾರಿಯನ್ನು ಸರ್ಕಾರದವತಿಯಿಂದಲ್ಲದೆ ಖಾಸಗಿಯವರಿಗೆ ವಹಿಸಲು ಸರ್ಕಾರದವರು ಮುಂದಾಗುವರೆ?

ಶ್ರೀ ಶಿವಾನಂದ ಹೆಚ್. ಕೌಲಜಗಿ: ಲೋಕೋಪಯೋಗಿ ಸಚಿವರು

ಅ) ಸೇತುವೆ ನಿರ್ಮಾಣದ ಪ್ರಸ್ತಾವನೆ ಇದೆ. ಆದರೆ ಬ್ರಿಜ್ ಕಮ್ ಬ್ಯಾರೇಜ್ ನಿರ್ಮಾಣದ ಪ್ರಸ್ತಾವನೆ ಇರುವುದಿಲ್ಲ.

ಆ) ಈ ಸೇತುವೆ ಕಾಮಗಾರಿಯು ಅತೀ ದೊಡ್ಡ ಮೊತ್ತದ ಕಾಮಗಾರಿಯಾಗಿದೆ. ಆದ್ದರಿಂದ ಈ ಸೇತುವೆ ನಿರ್ಮಾಣದ ವೆಚ್ಚವನ್ನು ಹೈದ್ರಾಬಾದ್-ಕರ್ನಾಟಕದ ಅಭಿವೃದ್ಧಿ ಮಂಡಳಿಯಲ್ಲಿ ಭರಿಸುವ ಬಗ್ಗೆ ಪ್ರಸ್ತಾಪ ಕುರಿತು ಪತ್ರ ವ್ಯವಹಾರ ಮಾಡಲಾಯಿತು. ಸದರಿ ಮಂಡಲಿಯು ವೆಚ್ಚ ಭರಿಸಲು ಒಪ್ಪಿರುವುದಿಲ್ಲ. ಈ ಕಾಮಗಾರಿಯ ರೇಖಾ ಅಂದಾಜುವೆಚ್ಚ ರೂ. 417.00 ಲಕ್ಷಗಳು. ಆದ್ದರಿಂದ 1995-96ನೇ ಸಾಲಿನಲ್ಲಿ ರಾಜ್ಯ ಆಯವ್ಯಯದಲ್ಲಿ ಸೇರಿಸಲು ಸರ್ಕಾದ ಪರಿಶೀಲನೆಯಲ್ಲಿದೆ.

ಇ) ಖಾಸಗಿಯವರು ಈ ಸೇತುವೆ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸಿದಲ್ಲಿ ಅಂತಹ ಪ್ರಸ್ತಾವನೆಯನ್ನು ಅರ್ಹತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು

ಶ್ರೀ.ಡಿ.ಆರ್. ಪಾಟೀಲ್:- ಸರ್ಕಾರಕ್ಕೆ ಹಣಕಾಸಿನ ತೊಂದರೆಯಿದ್ದಲ್ಲಿ ಸ್ಥಳೀಯ ಖಾಸಗಿ ಜನರು ಮುಂದೆ ಅವರಿಗೆ ಕೂಡಲೇ ಅನುಮತಿ ನೀಡುವರೇ? ಇಂತಹ ಖಾಸಗೀಪ್ರಸ್ತಾವನೆಗೆ ಇರುವ ಷರತ್ತುಗಳೇನು? ಹಾಕಿದ ಬಂಡವಾಳದ ಮೇಲೆ ಎಷ್ಟು ಲಾಭಾಂಶ ತೆಗೆದುಕೊಳ್ಳಲು ಅವಕಾಶವಿದೆ?

ಶ್ರೀ ಶಿವಾನಂದ. ಎಚ್. ಕೌಜಲಗಿ, ಮಾನ್ಯ ಅಧ್ಯಕ್ಷರೆ, ಸೇತುವೆ ಉದ್ದೇಶಿಸಲಾಗಿರುವ ಸ್ಥಳ ಬಳ್ಳಾರಿ ಮತ್ತು ಧಾರವಾಡ ಈ ಎರಡೂ ಜಿಲ್ಲೆಗಳ ಮಧ್ಯೆ ಇರುವುದರಿಂದ ಒಂದು ಮಹತ್ವವಾದ ಸೇತುವೆಯನ್ನು ನಿರ್ಮಿಸಬೇಕಾಗುತ್ತದೆ. ಈ ಸೇತುವೆ ಕಟ್ಟಲು ಸುಮಾರು 4 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಖಾಸಗಿಯವರೇನಾದರೂ ಮುಂದೆ ಬಂದಲ್ಲಿ ಅದನ್ನು ಆದ್ಯತೆ ಮೇರೆಗೆ ಪರಿಶೀಲಿಸಲಾಗುವುದು.

ಶ್ರೀ ದಿ. ಆರ್. ಪಾಟೀಲ್ :- ಖಾಸಗಿಯವರು ಮುಂದೆ ಬರಲು ಈಗಾಗಲೇ ತಯಾರಾಗಿದ್ದಾರೆ, ತಾವು ಖಂಡಿತವಾಗಿ ಅನುಮತಿಯನ್ನು ಖಾಸಗಿಯವರಿಗೆ ಕೊಡುತ್ತೀರೆಂದು ಹೇಳಿದರೆ ನಾವು ಸ್ಥಳೀಯ ಖಾಸಗಿ ಜನರಿಗೆ ಹೇಳಲು ಅನುಕೂಲವಾಗುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ:- ಅವರ ಟರ್ಮ್ಸ್ ಮತ್ತು ಕಂಡೀಷನ್‌ಗಳನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ. ಡಿ.ಆರ್. 'ಪಾಟೀಲ್:- ಪವರ್ ಪ್ರಾಜೆಕ್ಟ್‌ಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದೀರಿ. ಅದೇ ರೀತಿ ಇದಕ್ಕೂ ಸಹ ಒಪ್ಪಿಗೆಯನ್ನು ಕೊಡುತ್ತೀರೋ?

ಶ್ರೀ ಶಿವಾನಂದ ಎಚ್. ಕೌಜಲಗಿ :- ನಾವು ಕೊಡುವುದಿಲ್ಲವೆಂದು ಹೇಳಿಲ್ಲ. ಖಾಸಗಿಯವರು ಯಾವ ಪ್ರಕಾರವಾಗಿ ಹಣವನ್ನು ತೊಡಗಿಸಲು ಮುಂದೆ ಬರುತ್ತಾರೆ, ಅವರ ಟರ್ಮ್ಸ್ ಮತ್ತು ಕಂಡಿಷನ್‌ಗಳೇನು ಅದನ್ನು ಸರ್ಕಾರಕ್ಕೆ ಕಳಿಸಿದಾಗ ಅವುಗಳೆಲ್ಲವನ್ನು ನಾವು ಪರಿಶೀಲಿಸಿ ಅದು-ಯೋಗ್ಯವೆಂದು ತಿಳಿದು ಬಂದಲ್ಲಿ ಅದನ್ನು ಖಾಸಗೀಯವರಿಗೆ ಕೊಡುತ್ತೇವೆ. ಸ್ಥಳೀಯರು ಮುಂದೆ ಬಂದಲ್ಲಿ ಅಂಥವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ. ಡಿ.ಆರ್. ಪಾಟೀಲ್:- ಖಾಸಗಿಯವರ ಷರತ್ತುಗಳು ಸರ್ಕಾರಕ್ಕೆ ಒಪ್ಪಿಗೆಯಾಗದಿದ್ದಲ್ಲಿ ಸರ್ಕಾರವೆ ಈ ಯೋಜನೆಯನ್ನು ಮುಂದಿನ ಹಣಕಾಸು ವರ್ಷದಲ್ಲಿ ಪೂರ್ಣಗೊಳಿಸುತ್ತದೆಯೇ?

ಶ್ರೀ ಶಿವಾನಂದ ಎಚ್. ಕೌಜಲಗಿ :- ಸರ್ಕಾರಕ್ಕೆ ಈ ಬ್ರಿಡ್ಜ್ ಅತ್ಯವಶ್ಯಕವೆಂದು ಕಂಡುಬಂದಿದೆ. ಆದರೆ ಹಣಕಾಸಿನ ಸ್ಥಿತಿಯನ್ನು ನೋಡಿಕೊಂಡು ಆದ್ಯತೆಯ ಮೇಲೆ ಈ ಕೆಲಸವನ್ನು ತೆಗೆದುಕೊಳ್ಳಲಾಗುತ್ತದೆ. ಖಾಸಗಿಯವರು ಮುಂದೆ ಬರದಿದ್ದಲ್ಲಿ ಸರ್ಕಾರದ ವತಿಯಿಂದ ಇದನ್ನು ತೆಗದುಕೊಳ್ಳುವ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ವಾಟಾಳ್‌ನಾಗರಾಜ್‌ರವರ ಪ್ರಶ್ನೆ ಸಂಖ್ಯೆ (60) 61(21)ಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಲು ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಅಧ್ಯಕ್ಷರೆ, ಸಮಯವೇಕೆ ಬೇಕು, ಮಾನ್ಯ ಉಪಮುಖ್ಯ ಮಂತ್ರಿಗಳು ವಿದೇಶಕ್ಕೆ ಹೋಗಿ ಬಂದಿದ್ದಾರೆ, ಯಾವ್ಯಾವ ಕಂಪನಿಗಳೆಂದು ಅವರಿಗೆ ಬಾಯಿಯಲ್ಲಿಯೇ ಇರುತ್ತದೆ. ಯಾವ್ಯಾವ ಕಂಪನಿಗಳ ಜೊತೆ ಏನೇನು ಒಪ್ಪಂದಗಳನ್ನು ಮಾಡಿಕೊಂಡು ಬಂದಿದ್ದೇವೆಂದು ಅವರಿಗೆ ಗೊತ್ತಿದೆ ಅವರಿಗೇಕೆ ಉತ್ತರವನ್ನು ಕೊಡಲು ಸಮಯ?

ಅಧ್ಯಕ್ಷರು :- ತಾವಿಬ್ಬರು ಮಾತನಾಡಿಕೊಳ್ಳುತ್ತಿರುವಾಗ ಈ ವಿಚಾರದ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದಾರೆಂದಿದ್ದೆ.

ಶ್ರೀವಾಟಾಳ್‌ನಾಗರಾಜ್:- ತಮ್ಮ ಕೋಣೆಯಲ್ಲಿ ಅವರೊಂದಿಗೆ ಮಾತನಾಡುವಾಗ ವಿಚಾರದ ಬಗ್ಗೆ ಮಾತನಾಡಲಿಲ್ಲ.

ಅಧ್ಯಕ್ಷರು :- ದಯಮಾಡಿ ಕುಳಿತುಕೊಳ್ಳಿ. ಹಾಗೆಯೆ ಶ್ರೀ ಜಿ.ಟಿ. ಪಾಟೀಲರ ಪ್ರಶ್ನೆ ಸಂಖ್ಯೆ 62(508)ಗೆ ಸಹ ಸ್ವಲ್ಪ ಸಮಯವನ್ನು ಕೇಳಿದ್ದಾರೆ.

ವಿಷಯ:- ಶಿಕಾರಿಪುರ ತಾಲ್ಲೂಕು ಶಿರಾಳ ಕೊಪ್ಪದಲ್ಲಿ ಕುಡಿಯುವ ನೀರಿನ ಅಭಾವ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 63 (14)
ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

1. ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪಲದಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
2. ನೀರಿನ ಅಭಾವವನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು
ಶ್ರೀ. ಎಂ.ಪಿ. ಪ್ರಕಾಶ

1. ಬಂದಿದೆ.
2. ಶಿರಾಳಕೊಪ್ಪಲದಲ್ಲಿ ನೀರು ಸರಬರಾಜಿನ ಸ್ಥಿತಿಯನ್ನು ಉತ್ತಮಗೊಳಿಸಲು ಒಂದು ಸುಧಾರಣಾ ಯೋಜನೆಯನ್ನು 1993ರಲ್ಲಿಯೇ ಮಂಜೂರು ಮಾಡಲಾಗಿದೆ ಮತ್ತು ಕೆಲಸವು ಈಗ ಪ್ರಗತಿಯಲ್ಲಿದೆ.